ಜಾಹೀರಾತಿಗೆ ಉತ್ತಮ ಪ್ರಚಾರ ಸಾಧನ ಸತ್ಯವಾದಿ

ವಿವರಗಳಿಗೆ:

ಕಚೇರಿಗೆ ಬರೆಯಿರಿ

Regd No M 1299 33 ನೇ ವರ್ಷ ತಾ|| 13—1—50

ಸತ್ಯವಾದಿ
SATYAVADI

ಸ್ಥಾಪಕರು: ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

Protect the Cow
ಗೋರಕ್ಷಣೆ ನಡೆಯಲಿ

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ

ಮೈಸೂರು ಶ್ರೀಮನ್ಮಹಾರಾಜರವರು 26 ನೇ ತಾರೀಖಿನೊಳಗೆ ಬದಲಾವಣೆ ಮಾಡಲಾದ ಒಡಂಬಡಿಕೆಗೆ ಸಹಿ ಹಾಕಬೇಕು

ಮೈಸೂರು, ಜ 12 : ಮೈಸೂರು ಶ್ರೀಮನ್ಮಹಾರಾಜರಿಗೆಭಾರತ ಸರ್ಕಾರಕ್ಕೂ ಒಪ್ಪಂದ ನಡೆದಿರುವುದರಲ್ಲಿ ಒದಗಲಾವಣೆಗಳಾಗಿವೆ 26 ನೇ ತಾ|| ಒಳಗೆ ಬದಲಾವಣೆಗೆ ಶ್ರೀಮನ್ಮಹಾರಾಜರು ಒಪ್ಪುವಾಗಬೇಕು ಭಾರತದಲ್ಲಿ ಮೈಸೂರಿನ್ನು ರಾಜಪ್ರಮುಖರು ಎನ್ನಲಾಗುವುದು ಮೈಸೂರು ವಂದಿ ಅವರನ್ನು ಮಹಾರಾಜರೆಂದು ಕರೆಯಬಹುದು ಶ್ರೀಮನ್ಮಹಾರಾಜರ ರಾಜಧನ ವಿಷಯದಲ್ಲಿ ನಿರ್ದಿಷ್ಟ ಪರ್ಯಾಲೋಚನೆ ನಡೆದಿಲ್ಲ ಎಂದು ಶ್ರೀ ಏ ಪಿ ಮೆನನ್ ಪರಿದಿಗಾರರಿಗೆ ತಿಳಿಸಿದರು

ಘಟನಾ ಸಮಿತಿ

ಶ್ರೀ ತಾಳಕೆರೆ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಿನ್ನೆ ದಿವಸ ಮಧ್ಯಾಹ್ನ ಸಮಾವೇಶಗೊಂಡಿದ್ದ ಮೈಸೂರು ಘಟನಾ ಸಮಿತಿಯಲ್ಲಿ 26 ನೇ ತಾ|| ನಿಂದ ಸಮಿತಿ ರದ್ದಾಗುವ ನಿರ್ಣಯವಾಯಿತು ಶ್ರೀ ಕೆ ಸಿ ರೆಡ್ಡಿಯವರು ನಿರ್ಣಯ ಮಂಡಿಸಿದರು

ಭಯಂಕರ ಕೆಲಸ ಆಸಕ್ತತೆ

ಭಾರತ ಕಮ್ಯುನಿಸ್ಟ್ ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀ ಪಿ ಸಿ ಜೋಷಿಯವರು ಭಯಂಕರ ಕೃತ್ಯಗಳಲ್ಲಿ ಕಮ್ಯುನಿಸ್ಟ್ ಪಕ್ಷ ತೊಡಗಿದೆ ಎಂದು ಕಲ್ಕತ್ತಾದಲ್ಲಿ ತಿಳಿಸಿದ್ದಾರೆ

ಪರಿಸ್ಥಿತಿ ಸುಧಾರಿಸುವುದು

ಇನ್ನು 15 ದಿವಸಗಳಲ್ಲಿ ಚಿತ್ರದುರ್ಗ ಅಕ್ಕಿ ಪರಿಸ್ಥಿತಿ ಸುಧಾರಿಸುವುದು ಎಂದು ಅಲ್ಲಿನ ಜಿಲ್ಲಾಧಿಕಾರಿಗಳು ಸುದ್ದಿಗಾರರಿಗೆ ತಿಳಿಸಿದರು.

ಪ್ರಾಯೋಪವೇಶ ಪ್ರಾರಂಭ

ಇಂದೂರು ಕೇಂದ್ರ ಕಾರಾಗೃಹದ 20 ಮಂದಿ ಕಮ್ಯುನಿಸ್ಟರು ತಮ್ಮ ಬೇಡಿಕೆಗಳು ಈಡೇರಲೇಬೇಕೆಂದು ಮೊನ್ನೆಯಿಂದ ಅನ್ನ ತ್ಯಜಿಸಿದ್ದಾರೆ.

ದೇವರನ್ನು ಕಂಡಂತೆ !

ಶ್ರೀ ವೀರ ನಾರಾಯಣಸ್ವಾಮಿ ದೇವರು ನನ್ನೊಡನೆ ಸಂಭಾಷಿಸಿದರು ಭಂಗೀ ಕರ್ತವ್ಯ ಪಾಲಿಸಲು ಮತ್ತು ಹರಿಜನರ ವಿರುದ್ಧ ಹೂಡಿದ್ದ ಮೊಕದ್ದಮೆಯಲ್ಲಿ ಪ್ರತಿವಾದಿಯ ಪರ ಶ್ರೀ ವೀರಭದ್ರಪ್ಪ ಶಿವಷಂಪಿ ಎಂಬುವರು ಮೊನ್ನೆ ಗದಗಿನಲ್ಲಿ ನ್ಯಾಯಾಧೀಶರ ಸಂಮುಖದಲ್ಲಿ ಸಾಕ್ಷ್ಯ ನುಡಿದ್ದಾರೆ.

ಶ್ರೀ ತಿಮ್ಮಾಬೋಯಿ

ಶ್ರೀ ತಿಮ್ಮಾಬೋಯಿಯವರನ್ನು ನಿನ್ನೆ ದಿವಸ ಬೆಂಗಳೂರಿನಲ್ಲಿ ಕೂಡಿದ್ದ ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ, ಶಾಸನ ಸಭೆಯ ಉಪಾಧ್ಯಕ್ಷತೆಗೆ ಉಮೇದುವಾರನನ್ನಾಗಿ ನಿಲ್ಲಿಸಲು ತೀರ್ಮಾನಿಸಲಾಯಿತು

ಟಿಬೆಟ್ ಮಾತ್ರ ಉಳಿದಿದೆ

ಚೀನಾ ಕಮ್ಯುನಿಸ್ಟರು ಟಿಬೆಟ್ ಮಾತ್ರ ಉಳಿದು ಇನ್ನೆಲ್ಲಾ ಭಾಗಗಳನ್ನು ಆಕ್ರಮಿಸಿರುವುದಾಗಿ ಪೆಕಿಂಗ್ ರೇಡಿಯೋ ಸಾರಿದೆಯೆಂದು ಸ್ಯಾನ್ ಫ್ರಾನ್ಸಿಸ್ಕೋ ವಾರ್ತೆ ತಿಳಿಸುತ್ತದೆ

ಸಂಸ್ಕೃತ ಸಮ್ಮೇಳನ

ಬಹಾಂ ಗವರ್ನರ್ ಶ್ರೀ ಎಂ ಎಸ್ ಆಣೆಯವರು ಷಹಜಾದಿನ ಸಂಸ್ಕೃತ ಸಂಘ ಸಮ್ಮೇಳನ ಉದ್ಘಾಟಿಸುತ್ತಾ, ರಾಷ್ಟ್ರದಲ್ಲಿ ಸಂಸ್ಕೃತ ಉದ್ಧಾರವಾಗಬೇಕೆಂದು ಹೇಳಿ, ಹಿಂದಿನ ಕಾಲದಲ್ಲಿ ಕಾರ್ಮಿಕರೂ ಕೂಡ ಅಚ್ಛ ಸಂಸ್ಕೃತ ಮಾತನಾಡುತ್ತಿದ್ದರು ಎಂದರು.

ಉದ್ಯೋಗ ದೊರಕಿಸಿ

ಮೊನ್ನೆಯಿಂದ ಬೊಂಬಾಯಿ ಕಲ್ಯಾಣ ನಿರ್ವಾಸಿಕ ಕೇಂದ್ರದ ಮುನ್ನೂರು ಮಂದಿಗೆ ಉಚಿತ ಪಡಿತರ ರದ್ದಾಯಿತು. ಉದ್ಯೋಗ ಕಲ್ಪಿಸಿ ಇಲ್ಲವೇ ಉಚಿತ ಪಡಿತರ ಕೂಡಿ ಎಂದು ಅವರು ಪ್ರದರ್ಶನ ಮಾಡಿದರು.

ಶಾಸನ ಸಭೆ

[ಸ್ವಂ ಕು] ಬೆಂಗಳೂರು, ಜ 12

ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಶಾಸನ ಸಭೆ ಈ ಮಧ್ಯಾಹ್ನ 12-15 ಗಂಟೆಗೆ ಪ್ರಾರಂಭವಾಯಿತು

——ಸಭಾಸ್ಯಕ್ಷರು ಪ್ರಮಾಣ ವಚನ ಮಾಡಬೇಕಾದ ಅವಶ್ಯಕವೇನೂ ಇಲ್ಲ. ಎಂದು ಶ್ರೀ ಕೆ ಸಿ ರೆಡ್ಡಿಯವರು ಶ್ರೀ ಇಮಾಂರವರು ವಿಧಿಬಂದವಿಗೆ ಉತ್ತರವಿತ್ತರು

ಶ್ರೀ ಏ ವೆಂಕಟಪ್ಪನವರು ಅಧ್ಯಕ್ಷರಾಗಿ ಆಯ್ಕೆಯಾದರೆಂದು ಶ್ರೀ ಟಿ ಸಿದ್ದಲಿಂಗಯ್ಯನವರು ತಿಳಿಸಿದರು

ಶ್ರೀ ಏ ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿ ಮಂಡಿಸಿದ ತರುವಾಯ ಅವರನ್ನು ಅಭಿನಂದಿಸುವ ಭಾಷಣಗಳಾದವು

ಅಧ್ಯಕ್ಷರು ತಮ್ಮ ಬಗ್ಗೆ ಸದಸ್ಯರು ಆಡಿದ ನುಡಿಗಾಗಿ ವಂದಿಸಿದರು

ಸಚಿವ ಮಂಡಲ

ಶ್ರೀಗಳಾದ ಟಿ ಸಿದ್ದಲಿಂಗಯ್ಯ, ಕೆ ಹನುಮಂತಯ್ಯ ಅವರೊಡನೆ ಮೈಸೂರು ಸಚಿವ ಮಂಡಲ ಪುನರ್ರಚಿಸುವ ಬಗ್ಗೆ ಮಾತುಕತೆಯನ್ನು ಶ್ರೀ ಕೆ ಸಿ ರೆಡ್ಡಿ ನಿನ್ನೆ ಮಾತುಕತೆ ನಡೆಸಿದರೆಂದು ಬೆಂಗಳೂರು ವರದಿ. ಪರಸ್ಪರ ಮಾತುಕತೆಗಳಿಂದ ನಾಳೆಯೊಳಗೆ ಸಚಿವ ಮಂಡಲ ರಚನೆಯಾಗಬೇಕೆಂದು ತೀರ್ಮಾನವಾಯಿತು

ಆಸ್ತಿ ತನಿಖೆ ಅಜ್ಞಿ

ಶ್ರೀ ಬಸಪ್ಪ ಎಂಬ ಚಿತ್ರದುರ್ಗ ತಾಲ್ಲೂಕ್ ಫುಡ್ ಅಕೌಂಟೆಂಟ್‌ರಿಗೆ ರೂ. 75 ವೇತನ ಕೊಡಲಾಗುತ್ತಿದ್ದಿತು. ಅವರು ಜೀವವಿಮೆಗೆ ರೂ. 45 ಪ್ರೀಮಿಯಂ ಕಟ್ಟುತ್ತಿದ್ದರು. ಅವರ ಆಸ್ತಿ ತನಿಖೆ ಬಗ್ಗೆ ಜಿಲ್ಲಾಧಿಕಾರಿಗಳು ಅಜ್ಞಿ ಇತ್ತಿದ್ದಾರೆ. ಅವರನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆ.

ಮೈಸೂರು ಮಹಾರಾಜರು ಬಹಳ ಒಳ್ಳೆಯವರು; ಪ್ರತಿಭಾವಂತರು ಮತ್ತು ಸರಳ ಹೃದಯಿಗಳು ಎಂದು ಶ್ರೀ ಏ ಪಿ ಮೆನನ್‌ರವರು ಮೈಸೂರಿನಲ್ಲಿ ನಿನ್ನೆ ಸುದ್ದಿಗಾರರಿಗೆ ತಿಳಿಸಿದರು

ಅಪ್ರಯೋಜಕ ಮುಸೂದೆ

ನಿನ್ನೆ ಸಂಯುಕ್ತ ಪ್ರಾಂತ ವಿಧಿಮಂಡಲದಲ್ಲಿ ಭಾರಿ ಜೂಜಾಂದಾರರೀರ್ವರು ಜೂಜಾಂದಾರಿ ಮುಸೂದೆಯನ್ನು ಖಂಡಿಸಿತ್ತಾ, ಈ ಮುಸೂದೆಯಿಂದ ರೈತನಿಗಾಗಲಿ ಜಮೀಂದಾರನಿಗಾಗಲಿ ಪ್ರಯೋಜನವಿಲ್ಲ ಎಂದರು.

ಮನೆಯೊಡೆದು ಮುನ್ನೀತಿ

ಡಾಕ್ಕಾದಲ್ಲಿ ಹಿಂದೂ ಒರ್ವನ ಗೃಹವನ್ನು ಉರಿಸಿ ಮುನ್ನೀದಿ ಕಟ್ಟಲು ಜಿಲ್ಲಾಧಿಕಾರಿಗಳು ಅನುಮತಿ ಇತ್ತಿರುವರು

ಅರಾಬಿಕ್ ಲಿಪಿ ಬಳಕೆ

ಪೂರ್ವ ಬಂಗಾಳ ಸರ್ಕಾರ 20 ವರ್ಷಗಳ ಶಿಕ್ಷಣ ಕೇಂದ್ರ ಪ್ರಾರಂಭಿಸಿ ಅರಾಬಿಕ್ ಲಿಪಿಯಲ್ಲಿ ಬಂಗಾಳಿ ಶಿಕ್ಷಣ ನೀಡಲು ತೀರ್ಮಾನಿಸಿದೆ

ಸೂಚನೆ

ಸಂಕ್ರಾಂತಿ ಪ್ರಯುಕ್ತ ನಾಳೆ ಸತ್ಯವಾದಿ ಪ್ರಕಟವಾಗುವುದಿಲ್ಲ

ಪ್ರಭುಗಳ ಒಪ್ಪಿಗೆ

ಸಿವಿಲ್ ಲಿಸ್ಟ್ ಕಡಿಮೆ ಮಾಡಲು ಪ್ರಭುಗಳು ಒಪ್ಪಿರುವ ವಾರ್ತೆ ಬಿಗ್ಗೆ ದಿನದ ಒಂದಿದೆ ಇದರಿಂದ ಉಳಿತಾಯ ರೂ 8 ಲಕ್ಷ

ಹೈದರಾಬಾದಿನಲ್ಲಿ ಫಸಲೀ ಪಂಚಾಂಗಕ್ಕೆ ಮುಕ್ತಾಯ

ಮೊಗಲಾಯಿ ಚಕ್ರವರ್ತಿಗಳ ಕಾಲದಿಂದ, ಸುಮಾರು 300 ವರ್ಷಗಳಿಂದ ಹೈದರಾಬಾದ ಸಂಸ್ಥಾನದಲ್ಲಿ ಇದ್ದ ಫಸಲೀ ಕ್ಯಾಲೆಂಡರು ಪದ್ಧತಿಯು 1950 ನೇ ಇಸವಿ ಏಪ್ರಿಲ್ ತಿಂಗಳಿಂದ ಮುಕ್ತಾಯವಾಗುವುದು. ಅದರ ಸ್ಥಾನದಲ್ಲಿ ಇಂಗ್ಲೀಷು ಕ್ಯಾಲೆಂಡರು ಪದ್ಧತಿಯು ಜಾರಿಗೆ ಬರುವುದ.

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಪಂಪಸ್ಥಳಕ್ಕೆ ಅಂಚೆವೆಚ್ಚ ಸೇ೦ 12 ಆಣೆ

ಸತ್ಯವಾದಿ ಸೋಮವಾರ ಸಂಚಿಕೆ ಶ್ರೀ ದ್ವಾರಕಾ ಜಗದ್ಗುರುಗಳವರ ಉದಾತ್ತಾಶ್ರಯದಲ್ಲಿ ಪ್ರಕಟವಾಗುವ 'ಪ್ರಬೋಧ' ಧಾರ್ಮಿಕ ಸಪ್ತಾಹಿಕ ವನ್ನೊಳಗೊಂಡಿದೆ

ವಾರ್ಷಿಕಚಂದಾ ಪರಸ್ಥಳಕ್ಕೆ ಅಂಚೆವೆಚ್ಚ ಸಮೇತ 1–14–0

Woodlands

— ಬೆಳಗಿನ ಪ್ರದರ್ಶನ —

13–1–50 ರಿಂದ

ನಾದಿಯಾ ಪಾತ್ರನಹಿಸಿರುವ

ಹಿಮತ್‌ವಾಲಿ

ಆಹ್ಲಾದಕರವಾದ ಹಿಂದಿ ಚಿತ್ರ

ಹರ್ಷನಕಾಲದ ಪ್ರಾಚೀನ ನಗರ

ಕಪೋತಾಕ್ಷೀ ನದಿಯ ದಡದಲ್ಲಿರುವ ಕಪಿಲಮುನಿ ಗ್ರಾಮದ ಸಮೀಪದಲ್ಲಿ ಪ್ರಾಚೀನನಗರದ ಶಿಥಿಲಗಳು ಕಂಡುಬಂದಿವೆ. ಒಂದು ಪೊಡ್ಡು ಇಟ್ಟಿಗೆ ಗೋಡೆ, 8 ಮಾರುಗಳ ಅಗಲದ ರಾಜಬಕ್ಕೀಟು ರಸ್ತೆಯು ಈ ಶಿಥಿಲದಲ್ಲಿ ಮುಖ್ಯವಾದುವು. ಈ ಶಿಥಿಲ ನಗರವು ಹರ್ಷವರ್ಧನ ಕಾಲದಲ್ಲಿ ವೈಭವೋಪೇತವಾಗಿದ್ದಂತೆ ಪುರಾತನ ತತ್ವಶಾಸ್ತ್ರಜ್ಞರು ತಿಳಿಸುತ್ತಾರೆ. ಈ ಪ್ರಾಂತ್ಯದಲ್ಲಿ ಹಳೆಯ ನಾಣ್ಯಗಳು ಕಂಚಿನ ಪಾತ್ರೆಗಳು ಆಗಿಂದಾಗ್ಗೆ ಸಿಕ್ಕುತ್ತಲಿರುವಂತೆ.

ಮೂರ್ಛೆ ಸೂತಕವಾಯು ನಿವಾರಣೆಗೆ

ಅದ್ಭುತ ಅನುಭವಸಿದ್ಧ ಮೂಲಿಕೆ

ಚಿತ್ರಕೂಟದ ಮಹತ್ವ ವರದಾನ

ಮೂರ್ಛೆ ಬಂದ ಕಾಲದಲ್ಲಿ ಇದನ್ನು ಮೂಗಿನ ಎರಡು ಹೊಳ್ಳೆಗಳಲ್ಲಿಯೂ ಹಾಕಬೇಕು. ನಂತರ ಸೀನು ಬಂದು ಸತ್ತ ಕಫ್ಪು ಹುಳುವೊಂದು ಹೊರಕ್ಕೆ ಬರುವುದು. ರೋಗಿಯು ಎಂದೆಂದಿಗೂ ಗುಣಹೊಂದುವನು.

Mahatma Tiyagi Baba
Ansuiya Ashram
Chitrakot (Banda) U. P.

ಹರ್ಷನಕಾಲದ ಅಪೇರಾ — ಆಕರ್ಷಣೆಯ 2 ನೆ ವಾರ

Devamanohari

ಹೊನ್ನಪ್ಪ ಭಾಗವತರ್, ಭಾನುಮತಿ, ಸರೋಜ, ಕಾಳಿ ಎಸ್. ರತ್ನಂ ಲಲಿತ, ಪದ್ಮಿನಿಯವರ ಅಮೋಘ ಅಭಿನಯದಿಂದ ಕೂಡಿದ

ದೇವಮನೋಹರಿ

ಪ್ರತಿದಿನ 3 ಆಟಗಳು (ಮಹೋನ್ನತ ತಮಿಳು ಚಿತ್ರ)

ರಣಜಿತ್ — ಜನಭರಿತ 4 ನೇ ವಾರ

ANDAZ

ನರ್ಗಿಸ್, ದಿಲೀಪಕುಮಾರ್ ರಾಜಾ ಕಾಪೂರ್ ಪಾತ್ರನಹಿಸಿರುವ ಮಹಬೂಬರ ಮನೋಹರ ಹಿಂದಿ ಚಿತ್ರ

ಅಂದಾಜ್

ಪ್ರತಿ ದಿನ 3 ಆಟಗಳು

ವುಡ್‌ಲ್ಯಾಂಡ್ಸ್ — 13–1–50 ರಿಂದ

.... ಪೊಂಗಲ್ ಹಬ್ಬದ ಪ್ರಯುಕ್ತ ....

ಜಾನಪಹಚಾನ

ಮನಮೋಹನ ಹಿಂದಿ ಚಿತ್ರ [ಪ್ರತಿ ದಿನ 3 ಆಟಗಳು]

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

Edited, Printed and Published by M. S. Krishna Rao, at the Satyavadi Press, Chamarajapuram Mysore